404

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 464 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಿವಕುಮಾರ್.ಕೆ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 11/12/2025 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ವಾರ್ತಾ ಇಲಾಖೆಯ ಮಾನ್ಯತೆ ಪಟ್ಟಿಯಲ್ಲಿ ಇಲ್ಲದ ಒಟ್ಟು ಪತ್ರಿಕೆಗಳು ಎಷ್ಟು ಹಾಗೂ ಎಷ್ಟು ಜನ ಪತ್ರಕರ್ತರು ಕಾರ್ಯ ನಿರ್ವಹಿಸುತ್ತಿದ್ದಾರೆ : (ಮಾಹಿತಿ ಒದಗಿಸುವುದು) : | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಮಾನ್ಯತಾ ಪಟ್ಟಿಯಲ್ಲಿ ಇಲ್ಲದ ಪತ್ರಿಕೆಗಳ ವಿವರವು ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. |
| ಆ | ಎಲ್ಲಾ ಪತ್ರಕರ್ತರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಕುರಿತು ಸರ್ಕಾರ ಒಂದು ಸಮೀಕ್ಷೆಯನ್ನು ನಡೆಸಲು ಶ್ರಮ ವಹಿಸುವುದೇ : | ಈಗಾಗಲೇ ರಾಜ್ಯದಲ್ಲಿ ಪತ್ರಕರ್ತರನ್ನೂ ಒಳಗೊಂಡಂತೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ- ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2025ರ ವತಿಯಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಲಾಗಿರುವುದರಿಂದ ಪತ್ರಕರ್ತರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಕುರಿತು ಪ್ರತ್ಯೇಕ ಸಮೀಕ್ಷೆ ನಡೆಸುವ ಅಗತ್ಯತೆ ಕಂಡು ಬರುವುದಿಲ್ಲ. |
| ಇ | ನಿವೃತ್ತಿ ಹೊಂದಿರುವ ಹಿರಿಯ ಪತ್ರಕರ್ತರಿಗೆ ಮಾಸಾಶನ ನೀಡುವ ವ್ಯವಸ್ಥೆಯಿದ್ದು, ಇದನ್ನು ಪಡೆಯಲು ಕಠಿಣ ನಿಯಮಗಳನ್ನು ರೂಪಿಸಲಾಗಿದೆ ಎಂಬುದು ನಿಜವೇ : | ರಾಜ್ಯದಲ್ಲಿನ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ಮಾಸಾಶನ ನೀಡಲು ಸರ್ಕಾರದ ಆದೇಶ ಸಂಖ್ಯೆ : ಐಡಿಇವೈ 159 ಪಿಐಎಸ್ 1983 ದಿನಾಂಕ:10-02-1984ರನ್ವಯ ನಿಯಮಾವಳಿಗಳನ್ನು ರೂಪಿಸಿದ್ದು, ಸದರಿ ನಿಯಮಗಳನ್ನು ಯೋಜನೆಯ ಉದ್ದೇಶವು ದುರುಪಯೋಗವಾಗದಂತೆ ಹಾಗೂ ನಿಜವಾಗಿಯೂ ಅವಶ್ಯಕತೆಯಿರುವ ಅರ್ಹರಿಗೆ ಈ ಸೌಲಭ್ಯವು ದೊರಕುವಂತಾಗಲು ಕಾಲಕಾಲಕ್ಕೆ ಸರಳೀಕರಿಸಿ ಪರಿಷ್ಕರಿಸಲಾಗುತ್ತಿದೆ. |
| ಈ | ಹಾಗಿದ್ದರೇ, ಸರ್ಕಾರದ ನಿಯಮಗಳು ಏನು ಮತ್ತು ಅವುಗಳನ್ನು ಸರಳೀಕರಿಸುವ ಚಿಂತನೆ ಇದೆಯೇ ? | ಪ್ರಸಕ್ತ ಮಾಧ್ಯಮ ರಂಗದಲ್ಲಿನ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಇತ್ತೀಚೆಗೆ ಸರ್ಕಾರದ ಆದೇಶ ಸಂಖ್ಯೆ:ಕೆಸಿಐ-ವಿಪಿಪಿ/15/2022, ದಿನಾಂಕ: 20-06-2024ರನ್ವಯ ಮಾಸಾಶನ ನಿಯಮಗಳನ್ನು ಸರಳೀಕರಿಸಿ ತಿದ್ದುಪಡಿ ಮಾಡಲಾಗಿದ್ದು, ಅರ್ಹರಿಗೆ ಮಾಸಾಶನ ನೀಡಲಾಗುತ್ತಿದೆ. |

ಸಂ:ಕೆಸಿಐ-ಪಿಐಪಿ/286/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ